ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು 2, 3, 5 ರಿಂದ 9 ಮತ್ತು 11 ನೇ ಪ್ರತಿವಾದಿ ಪರ ಶ್ರೀ ಎಸ್ ಎಲ್ ವಕೀಲರಿಂದಃ

ಪ್ರಸ್ತುತ ದಾವೆಯನ್ನು ಸರ್ವೆ ನಂಃ204/2 ವಿಸ್ತೀರ್ಣ 4 ಎಕರೆ 4 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ದಾವೆಯನ್ನು ದಾಖಲಿಸಿದ್ದೇನೆ. ಸದರಿ ಜಮೀನಿ ಚಕ್ಕುಬಂದಿ ಪೂರ್ವಕ್ಕೆ ಸರ್ಕಾರಿ ನಾಲೆ, ಪಶ್ಚಿಮಕ್ಕೆ ಗುರುವಯ್ಯ ಬಿನ್ ಬಾಳಯ್ಯನವರ ಜಮೀನು, ಉತ್ತರಕ್ಕೆ ನರಸಿಂಹಯ್ಯ, ನಂಜುಂಡಪ್ಪ ಮತ್ತು ಇತರರುಗಳ ಜಮೀನು, ದಕ್ಷಿಣಕ್ಕೆ ನಂಜರೆಡ್ಡಿ ರವರ ಜಮೀನು. ದಿನರಾಕಃ10.09.1951 ರಲ್ಲಿ ನನ್ನ ತಾತ ಚಿನ್ನರೆಡ್ಡಿ ಎಂಬುವರ ಕಡೆಯಿಂದ ಖರೀದಿಸಿರುತ್ತಾರೆ. ನನ್ನ ತಾತನಿಗೆ ಸದರಿ ಜಮೀನು ಖಾತೆ ದಿನಾಂಕಃ10.09.1951 ರಂದು ಆಗಿರುತ್ತದೆ. ನನ್ನ ತಾತನ ಹೆಸರಿಗೆ ಆದ ಖಾತೆಗೆ ಸಂಬಂಧಪಟ್ಟ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಸಾಕ್ಷಿಗೆ ನಿಪಿ-6 ಎಂ ಆರ್ ಕಾಪಿಯನ್ನು ತೋರಿಸಿ ಅದರಲಿ ಹೇಳಿರುವಂತೆ ಜುಬಾನೆ ವಿಭಾಗದ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೀರಾ ಎಂದರೆ ಸಾಕ್ಷಿಯು ನಾನು ನಮ್ಮ ತಂದೆಯವರ ಬಳಿ ಜುಬಾನೆ ವಿಭಾಗ ಪತ್ರದ ಬಗ್ಗೆ ಕೇಳಿರುತ್ತೇನೆ ಅದಕ್ಕೆ ಅವರು ಆ ರೀತಿಯ ಪತ್ರ ಇರುವುದಿಲ್ಲ ಆದರೆ ನಾವು ತಹಶೀಲ್ದಾರರ ಮುಂದೆ ವಿಭಾಗ ಮಾಡಿಕೊಂಡಿರುವುದಾಗಿ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-6 ರಲ್ಲಿ ದಿನಾಂಕಃ17.03.1988 ರಲ್ಲಿ ಖಾತೆಯ ಬದಲಾವಣೆಗೆ ಅರ್ಜಿ ಸಲಿಸಲಾಗಿತ್ತು ಎಂದು ಬರೆಯಲಾಗಿದ್ದು ಆ ಬಗ್ಗೆ ದಾಖಲಾತಿಯನುನ್ನ ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ.

ನಿಪಿ-6 ರಲ್ಲಿ ಹೇಳಿರುವಂತೆ ಆರ್ ಆರ್ ಟಿ (ಹೆಚ್) 44/1987-88 ರಂತೆ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ನ್ಯಾಯಾಲಯಕ್ಕೆ ಅವಶ್ಯಕತೆ ಬಿದ್ದಲ್ಲಿ ಅರ್ಜಿಯಾಕಿ ಅದನ್ನು ತಂದು ನ್ಯಾಯಾಲಯಕ್ಕೆ ಹಾಜರುಪಡಿಸುತೇನೆ ಎಂದು ನುಡಿಯುತ್ತಾರೆ. ಸದರಿ ಜುಭಾನೆ ವಿಭಾಗದಂತೆ ನಮ್ಮ ತಂದೆಯವರಿಗೆ 5 ಸರ್ವೆ ನಂಬರ್ ನಲ್ಲಿ ಆಸ್ತಿ ಬಂದಿರುತ್ತದೆ. ಸದರಿ 5 ಜಮೀನಿಗೆ ಸಂಬಂದಪಟ್ಟಂತೆ ನಮ್ಮ ತಂದೆಯ ಹೆಸರಿಗೆ ಖಾತೆ ಬಂದಿರುತ್ತದೆ ಎಂದರೆ ಸರಿ. ಸದರಿ ಜಮೀನುಗಳ ಮೇಲೆ ನಮ್ಮ ತಂದೆಯವರು ಸಾಲವನ್ನು ಸಹ ಪಡೆದಿದ್ದರು ಎಂದರೆ ಸರಿ.

1987-88 ಸಾಲಿನಲ್ಲಿ ಸದರಿ ದಾವಾ ಆಸ್ತಿಯು ನಮ್ಮ ತಾತನವರ ಹೆಸರಿನಲ್ಲಿ ಇತ್ತು. ನನ್ನ ತಾತನ ಹೆಸರಿನಿಂದ ನನ್ನ ಚಿಕ್ಕಪ್ಪ ದೊಡ್ಡಪ್ಪನವರ ಮಕ್ಕಳ ಹೆಸರಿಗೆ ಯಾವಾಗ ಖಾತೆ ವರ್ಗಾವಣೆಯಾಯಿತು ಎಂದರೆ ಸಾಕ್ಷಿಯು ಅದು ಯಾವ ವರ್ಷದಂದು ಖಾತೆಯಾಗಿರುತ್ತದೆ ಎಂದು ಈಗ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂಃ204/2 ನ 4 ಎಕರೆ 4 ಗುಂಟೆ ಜಮೀನು ಯಾರಾರ ಹೆಸರಿಗೆ ಎಷ್ಟೆಷ್ಟು ಜಮೀನು ಹೋಗಿದೆ ಎಂದು ನನಗೆ ಗೊತ್ತಿರುವುದಿಲ್ಲ. ನಿಪಿ-5 ಪಹಣಿಯನ್ನು ಸಾಕ್ಷಿಗೆ ತೋರಿಸಿ ಅದರಂತೆ ಪ್ರತಿವಾದಿ 3 ಗುರುಮೂರ್ತಿಯವರಿಗೆ 2 ಎಕರೆ 27 ಗುಂಟೆ ಜಮೀನು 1987-88 ರಲ್ಲಿ ಆಗಿರುತ್ತದೆ, ಪ್ರತಿವಾದಿ 1 ರವರ ತಂದೆ ಮಾದಯ್ಯ ಬಿನ್ ಸಿದ್ದಯ್ಯ ರವರಿಗೆ 38 ಗುಂಟೆ ಜಮೀನು, ಪ್ರತಿವಾದಿ 3 ರವರ ಹೆಸರಿಗೆ 1 ಎಕರೆ 4 ಗುಂಟೆ ಜಮೀನು 1995-96 ರಲ್ಲಿ ಬಂದಿರುತ್ತದೆ. ಪ್ರತಿವಾದಿ

3 ರವರು ಸದರಿ ಜಮೀನಿನ ಮೇಲೆ ಸಾಲವನ್ನು ಸಹ ಪಡೆದುಕೊಂಡಿದ್ದರು ಎಂದರೆ ಸರಿ. ದಾವಾ ಆಸ್ತಿಯಲ್ಲಿ ಪ್ರತಿವಾದಿ 6 ದೇವರಾಜು ಮತ್ತು ಮಾದಯ್ಯ ನವರು ಸ್ವಾಧೀನದಲ್ಲಿರುತ್ತಾರೆ. ದಾವಾ ಜಮೀನಿನ 4 ಎಕರೆ 2 ಗುಂಟೆ ಜಮೀನಿನಲ್ಲಿ ತೆಂಗನ ಮರಗಳು ಇವೆ. ಎಷ್ಟು ತೆಂಗಿನಮರಗಳು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಇರುವ ತೆಂಗಿನಮರದಿಂದ ತೆಂಗಿನ ಕಾಯಿಯನ್ನು ಯಾರು ಕೀಳಿಸುತ್ತಾರೆ ಎಂದು ನನಗೆ ಗೊತ್ತಿಲ್ಲ.

ಗುರುಮೂರ್ತಿ ಮತ್ತು ಮಾದಯ್ಯನವರ ಹೆಸರಿಗೆ ಆದ ಖಾತೆಯ ಬಗ್ಗೆ ನಿಮ್ಮ ತಂದೆ ಪ್ರಶ್ನೆ ಮಾಡಿರುತ್ತಾರೆಯೇ ಎಂದರೆ ಸಾಕ್ಷಿಯು ಪ್ರಶ್ನೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ತಂದೆಯವರು ತಹಶೀಲ್ದಾರರ ಮುಂದೆಯಾಗಲೀ ಅಥವಾ ಎಸಿ ಯವರ ಮುಂದೆಯಾಗಲೀ ಪ್ರಶ್ನೆ ಮಾಡಿರುತ್ತಾರಾ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಸ್ವಾಧಿನದಲ್ಲಿ ದೇವರಾಜು, ಗುರುಮೂರ್ತಿ, ನಾಗಣ್ಣ ನವರೇ ವ್ಯವಸಾಯ ಮಾಡಿಕೊಂಡು ಇರುತ್ತಾರೆ ಎಂದರೆ ಸಾಕ್ಷಿಯು ವ್ಯವಸಾಯ ಮಾಡಿಕೊಂಡು ಇರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ನಮ್ಮ ತಂದೆಯವರು ವ್ಯವಸಾಯ ಮಾಡುತ್ತಿದ್ದರು ನಮ್ಮ ತಂದೆಗೆ ವಯಸ್ಸಾದ ಕಾರಣ ಅವರು ವ್ಯವಸಾಯ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ.

ನಮ್ಮ ತಾತ ಸಿದ್ಧಯ್ಯ ಯಾವಾಗ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ ಅವರ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ನಮ್ಮ ತಂದೆಯವರು ದಾವಾ ಆಸ್ತಿಯಲ್ಲಿ ಎಲ್ಲಿಂದ

ಎಲ್ಲಿಯವರೆಗೆ ವ್ಯವಸಾಯ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿ ಗೆ ಸಂಬಂಧಪಟ್ಟಂತೆ ಹಳೆಯ ಕೈ ಬರಹದ ಪಹಣಿಯನ್ನು ಹಾಜರು ಮಾಡಿಲ್ಲ. ನಮ್ಮ ತಂದೆಯವರು ದಾವಾ ಆಸ್ತಿಯಲ್ಲಿ ವ್ಯವಸಾಯ ಮಾಡುತ್ತಿದ್ದ ಬಗ್ಗೆ ಪಹಣಿಯ ಕಲಂ ನಂಬರ್ 12 ರಲ್ಲಿ ಹೆಸರು ಬರುತ್ತಿದೆಯೇ ಎಂದು ನನಗೆ ತಿಳಿದಿಲ್ಲ. ನಮ್ಮ ತಂದೆಯವರು ದಾವಾ ಆಸ್ತಿಯಲ್ಲಿ ಬೆಳೆ ಬೆಳೆದು ಮಾರಾಟ ಮಾಡಿದ ಬಗ್ಗೆ ಯಾವುದೇ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ನಮ್ಮ ತಂದೆಯವರು ರಾಗಿ ಬೆಳೆಯುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆಯವರು ಕನ್ನಡವನ್ನು ಓದಲು ಬರೆಯಲು ಬರುತ್ತಿರಲಿಲ್ಲ ಆದರೆ ಸಹಿ ಮಾಡುತ್ತಿದ್ದರು. ಗುರುಮೂರ್ತಿ ಮತ್ತು ಮಾದಯ್ಯ ನವರ ಹೆಸರಿಗೆ 1987-88 ರಲ್ಲಿ ಖಾತೆಯಾದ ಬಗ್ಗೆ ನಮ್ಮ ತಂದೆಯವರಿಗೆ ತಿಳಿದಿತ್ತು ಎಂದರೆ ಸರಿಯಲ್ಲ. ಪ್ರಸ್ತುತ ದಾವೆಯನ್ನು ದಾಖಲಿಸುವ ಸಮಯದಲ್ಲಿ ಪಹಣಿಯನ್ನು ತೆಗೆಸಿದಾಗ ತಿಳಿದಿರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿ 14 ರವರಿಗೆ ದೇವರಾಜು ರವರು ದಾವೆಯನ್ನು ದಾಖಲಿಸುವ ಪೂರ್ವದಲ್ಲಿ ದಾವಾ ಆಸ್ತಿಯನ್ನು ದಾನ ಮಾಡಿದ್ದರು ಎಂದರೆ ಸರಿ. ಪ್ರಸ್ತುತ ದಾವೆಯನ್ನು ಹೂಡಿದ ನಂತರ ದಾನಪತ್ರದ ಬಗ್ಗೆ ತಿಳಿದುಬಂದಿರುತ್ತದೆ.

ಸಾಕ್ಷಿ ಪ್ರತಿವಾದಿ 14 ರವರ ಹೆಸರಿಗೆ ದಾನ ಪತ್ರವಾದ ಬಗ್ಗೆ ನಿಮಗೆ ಯಾವ ವರ್ಷ ತಿಳಿದುಬಂದಿದೆ ಎಂದರೆ ನನಗೆ ಯಾವ ವರ್ಷ ಎಂದು ನೆನಪಿಲ್ಲ ಎಂದು ನುಡಿಯುತ್ತಾರೆ. ದಾನ ಪತ್ರವನ್ನು ಪ್ರತಿವಾದಿ 14 ರವರಿಗೆ 1 ಎಕರೆ ಜಮೀನಿಗೆ ಸಂಬಂಧಪಟ್ಟಂತೆ ಮಾಡಿರುತ್ತಾರೆ. 2001 ರಲ್ಲಿ ದೇವರಾಜು ರವರಿಗೆ ಖಾತೆ ದಾಖಲಾಗಿರುತ್ತದೆ. ಸದರಿ

ದೇವರಾಜು ರವರ ಹೆಸರಿಗೆ 4 ಎಕರೆ 12 ಗುಂಟೆ ಜಮೀನಿನ ಖಾತೆ ದಾಖಲಾಗಿರುತ್ತದೆ. ಎಂ ಆರ್ 72-2000-01 ಇಸವಿಯ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಸದರಿ ಎಂ ಆರ್ ನಂತೆ ದೇವರಾಜು ರವರು ಸಾಲ ವನ್ನು ಸಹ ಪಡೆದಿರುತ್ತಾರೆ, ಆ ಬಗ್ಗೆ ನೀವಾಗಲೀ ನಿಮ್ಮ ತಂದೆಯವರಾಗಲೀ ತಕರಾರು ಮಾಡಿದ್ದೀರಾ ಎಂದರೆ ಸಾಕ್ಷಿಯು ನಮಗೆ ಅವರು ಸಾಲ ಪಡೆದ ವಿಚಾರ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-7 ಅನ್ನು ದಿನಾಂಕಃ13.07.2022 ರಲ್ಲಿ ನಾವು ಪಡೆದುಕೊಂಡಿರುತ್ತೇವೆ ಎಂದರೆ ಸರಿ. ಸದರಿ ದಾಖಲಾತಿಯನ್ನು ಪಡೆದುಕೊಳ್ಳುವ ಪೂರ್ವದಲ್ಲಿ ಸಹ ಸದರಿ ದಾಖಲೆಯನ್ನು ಪಡೆದುಕೊಂಡಿದ್ದೆ ಅದು ಎಂದು ತೆಗೆದುಕೊಂಡಿದ್ದೆ ಎಂದು ಈಗ ನನಗೆ ನೆನಪಿಲ್ಲ.

ಈ ಹಂತದಲ್ಲಿ ನ್ಯಾಯಾಲಯದ ಸಮಯದ ಅಭಾವದಿಂದ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.